**ಎಸ್.ಸಿ.ಸಂಖ್ಯೆ:10058/2025**
**ಪ್ರಾ.ಸಾ.ಸಂಖ್ಯೆ: 6**
**ಚಾ.ಸಾ.ಸಂಖ್ಯೆ: 10**

**<u>ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು , ಬಾಗಲಕೋಟೆ, ಉಪಸ್ಥಿತಿ: ಮುಧೋಳ</u>**

**ಎಸ್.ಸಿ.ಸಂಖ್ಯೆ: 10058/2025**

**ಸಾಕ್ಷಿಯನ್ನು ದಿ: 11.08.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ದಂ.ಪ್ರ.ಸಂ.ಕಲಂ 231(2) ರಡಿಯಲ್ಲಿ ಮಧ್ಯಂತರ ಅರ್ಜಿ ನಂ. 1 ರ ಮೇಲೆ ಆದ ಆದೇಶದಂತೆ</u>**

**<u>ಪಾಟಿಸವಾಲು: ಶ್ರೀ. ಆರ್.ಟಿ.ಹೆಚ್. ವಕೀಲರಿಂದ ಆರೋಪಿತರ ಪರವಾಗಿ.</u>**

ನನಗೆ ಸಾಲಮಂಟಪಿ ಕುಟುಂಬದವರು ನಮ್ಮ ಊರಿನವರಾಗಿದ್ದು, ಮೊದಲಿನಿಂದಲೂ ನನಗೆ ಪರಿಚಯಸ್ಥರು. ಸಾಲಮಂಟಪಿ ಇವರ ಮನೆಯ ಸುತ್ತಮುತ್ತ ಸಾಕಷ್ಟು ಮನೆಗಳು ಇವೆ ಎಂದರೆ ಸರಿ. ಅವರ ಮನೆಯ ಎದುರಿಗೆ ಭಜಂತ್ರಿ ಇವರ ಮನೆ ಇದೆ ಎಂದರೆ ಸರಿ. ನಮ್ಮ ಮನೆಗೂ ಹಾಗೂ ಸಾಲಮಂಟಪಿ ಇವರ ಮನೆಗೂ ಸುಮಾರು **200** ಮೀಟರ ಅಂತರವಾಗುತ್ತದೆ. ಮೂರು ಓಣಿಗಳ ನಂತರ ಇದೆ.

**2.** ಸಾಲಮಂಟಪಿ ಇವರ ಮನೆಯ ಹತ್ತಿರ ಗಲಾಟೆ ಆದರೆ ನಮ್ಮ ಮನೆಗೆ ಕೇಳಿಸುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ರಾತ್ರಿ **11-45** ಗಂಟೆಗೆ ಸಾಲಮಂಟಪಿ ಇವರ ಮನೆಯ ಹತ್ತಿರ ಹೋಗಿದ್ದೆ. ಅಲ್ಲಿ ಆಗಲೇ **10-12** ಜನ ಸೇರಿದ್ದರು. ಸಾಲಮಂಟಪಿ ಹಾಗೂ ಅವರ ಅಕ್ಕ-ಪಕ್ಕದವರು ಸೇರಿದ್ದರು ಎಂದರೆ ಸರಿ. ನಾನು ಗಲಾಟೆಯನ್ನು ನೋಡಿಲ್ಲ ಎಂದರೆ ಸರಿಯಲ್ಲ. ನಾನು ಹೋದಾಗ ಆರೋಪಿತರಿಬ್ಬರು ಅಲ್ಲಿ ಇದ್ದು, ನಂತರ ಆರೋಪಿತರ ತಂದೆ ಅಲ್ಲಿಗೆ ಬಂದರು. ನಾನು ಹೋದ ಐದು ನಿಮಿಷಕ್ಕೆ ಆರೋಪಿತರ ತಂದೆ ಬಂದಿದ್ದರು. ವಿಠ್ಠಲನ ಕುಟುಂಬದವರಾದ ರಾಜು, ದೇವರಾಜು ಅಲ್ಲಿದ್ದರು. ಅವರೊಂದಿಗೆ ಜಗಳ ನಡೆಯುತ್ತಿತ್ತು.

**3.** ವಿಠ್ಠಲನ ಜೊತೆ ಮಾತ್ರ ಜಗಳ ನಡೆಯುತ್ತಿತ್ತು. ವಿಠ್ಠಲನ ಹಣೆಗೆ ಆರೋಪಿತರಾದ ಪ್ರಕಾಶ ಮತ್ತು ಯಮನಪ್ಪ ಇಬ್ಬರೂ ಸೇರಿ ಹೊಡಿದಿದ್ದರು. ಆರೋಪಿತರ ಕೈಯಲ್ಲಿ ಬಡಿಗೆ ಇರಲಿಲ್ಲ. ಕೈಯಿಂದ ಗುದ್ದಿದ್ದರು. ವಿಠ್ಠಲನ ಹಣೆಗೆ ಗುದ್ದಿದ್ದರಿಂದ ರಕ್ತ ಬಂದಿತ್ತು. ವಿಠ್ಠಲ ಬಿಳಿ ಅಂಗಿ, ಬಿಳಿ ಪಂಚೆ

ಉಟ್ಟಿದ್ದ. ಬಟ್ಟೆ ಮೇಲೆ ರಕ್ತ ಬಿದ್ದಿತ್ತು. ವಿಠ್ಠಲನ ಮಕ್ಕಳು ಬಿಡಿಸಲು ಬಂದಾಗ ಆರೋಪಿತರು ಅವರಿಗೆ ಹೊಡಿಬಡಿ ಮಾಡಿಲ್ಲ. ವಿಠ್ಠಲನ ಹೆಂಡತಿಗೂ ಏನೂ ಮಾಡಿಲ್ಲ.

**4.** ನಾನು ಹೋಗುವ ಮುಂಚೆ ಬಿಡಿಸಲು ಬಂದವರಿಗೂ ಆರೋಪಿತರು ಬೈಯ್ಯುತ್ತಿದ್ದರು. ಅಲ್ಲಿ ಸೇರಿದ್ದ ಓಣಿಯವರ ಹೆಸರು ನಿಂಗಪ್ಪ ಹಂಪಿಹೊಳಿ ಹಾಗೂ ಇತರರು ಇದ್ದರು. ಇನ್ನುಳಿದವರ ಹೆಸರು ಹೇಳಲಾಗುವುದಿಲ್ಲ. ಮೃತ ತಾಯವ್ವಳಿಗೆ ಎದೆಗೆ ಮತ್ತು ಪಕ್ಕೆಗೆ (ಡೊಕ್ಕೆಗೆ) ಹೊಡೆದಿದ್ದರು. ಗಲಾಟೆಯಾದ ಐದು ನಿಮಿಷದಲ್ಲಿಯೇ ತಾಯವ್ವ ತೀರಿಕೊಂಡಿದ್ದಾಳೆ. ನಾನು ಆಕೆ ಬಿದ್ದಾಗ ಅವಳು ಉಸಿರಾಟ ಮಾಡುತ್ತಿದ್ದಾಳೋ ಇಲ್ಲವೋ ನಾನು ನೋಡಿದ್ದೇನೆ. ಆಕೆಗೆ ನೀರು ಹಾಕಿ ವ್ಯವಸ್ಥೆ ಮಾಡಿದ್ದೆವು. ಕದಮ್ ಎನ್ನುವ ಆರ್.ಎಮ್.ಪಿ. ಡಾಕ್ಟರ ಬಂದು ಚೆಕ್ಕ ಮಾಡಿದರು. ಅವರ ಮನೆಯು ಅಲ್ಲಿಯೇ ಹತ್ತಿರದಲ್ಲಿದ್ದು, ಅವರನ್ನು ಯಾರೋ ಹುಡುಗರು ಕರೆದುಕೊಂಡು ಬಂದಿದ್ದರು. ಯಾರೂ ಕರೆದುಕೊಂಡು ಬಂದಿದ್ದರು ಅಂತ ಅವರ ಹೆಸರು ಹೇಳಲಾಗುವುದಿಲ್ಲ.

**5.** ಕದಮ್ ಡಾಕ್ಟರ ನಾಡಿ ಬಡಿತ ಮತ್ತು ಕುತ್ತಿಗೆಯ ಎರಡೂ ಕಡೆ ಮುಟ್ಟಿ ಚೆಕ್ ಮಾಡಿರುತ್ತಾರೆ. ಸದರಿ ಡಾಕ್ಟರ ಅವಳ ಎದೆ ಒತ್ತಿ ನೋಡಿಲ್ಲ. ಪ್ರಜ್ಞೆ ತಪ್ಪಿರಲಿಲ್ಲ. ಆಕೆ ಏಕದಮ್ ಖಲಾಸ ಆಗಿದ್ದಳು. ಆರೋಪಿತರು ತಮ್ಮ ಮನೆಗೆ ಓಡಿ ಹೋದರು. ಆರೋಪಿತರು ಗಾಡಿ ತಂದಿರಲಿಲ್ಲ. ಆರೋಪಿ ಪ್ರಕಾಶನ ಹೆಂಡತಿ ಮಹಾದೇವಿ ಗ್ರಾಮ ಪಂಚಾಯತಿ ಅಧ್ಯಕ್ಷಳಾಗಿದ್ದಳು ಎಂದರೆ ಸರಿ. ನಾನು ಸಹ ಚುನಾವಣೆಗೆ ನಿಂತಿದ್ದೆ ಎಂದರೆ ಸರಿ. ನಾನು ಮತ್ತು ಆಕೆ ಒಂದೇ ವಾರ್ಡನಲ್ಲಿ ಚುನಾವಣೆಗೆ ನಿಂತಿದ್ದೆವು ಎಂದರೆ ಸರಿ. ಆಕೆ ಆರಿಸಿ ಬಂದು ಅಧ್ಯಕ್ಷಳಾಗಿದ್ದಳು ಎಂದರೆ ಸರಿ.

**6.** ವಿಠ್ಠಲ ಸಾಲಮಂಟಪಿ ಮೇಲೆ ಸಾಕಷ್ಟು ಅಬಕಾರಿ ಕೇಸುಗಳು ಇವೆ ಎಂದರೆ ಸರಿ. ಆತನ ಮಗ ದೇವರಾಜನ ಮೇಲೂ ಕೂಡ ಅಬಕಾರಿ ಕೇಸುಗಳು ಇವೆ ಎಂದರೆ ಸರಿಯಲ್ಲ. ಅವನ ಮೇಲೆ ಯಾವುದೇ ಕೇಸುಗಳು ಇಲ್ಲ. ಊರಲ್ಲಿ ಅಕ್ರಮ ಸರಾಯಿ ದಂದೆಯ ಬಗ್ಗೆ ಮಹಾದೇವಿ ಇವರು ಅಬಕಾರಿ ಇಲಾಖೆಗೆ ದೂರು ಸಲ್ಲಿಸಿದ್ದಳು ಎಂದರೆ ಸರಿಯಲ್ಲ. ಅವರೇ ಸರಾಯಿ ಮಾಡುತ್ತಾರೆ.

**ಎಸ್.ಸಿ.ಸಂಖ್ಯೆಃ 10058/2025**
**ಪ್ರಾ.ಸಾ.ಸಂಖ್ಯೆಃ 6**
**ಚಾ.ಸಾ.ಸಂಖ್ಯೆಃ 10**

ವಿಠ್ಠಲನ ಮನೆಯ ಮೇಲೆ ಅಬಕಾರಿ ಅಧಿಕಾರಿಗಳು ರೇಡ್ ಮಾಡಿದ್ದರು ಎಂದರೆ ಸರಿ. ಈ ವಿಚಾರವಾಗಿ ಆರೋಪಿತರ ಮೇಲೆ ವಿಠ್ಠಲ ಸಾಲಮಂಟಪಿ ಇವರಿಗೂ ಸಿಟ್ಟು ಇತ್ತು ಎಂದರೆ ಸರಿಯಲ್ಲ. ಚುನವಣಾ ಫಲಿತಾಂಶದಿಂದಾಗಿ ನನಗೆ ಆರೋಪಿತರ ಮೇಲೆ ದ್ವೇಷ ಇತ್ತು ಎಂದರೆ ಸರಿಯಲ್ಲ.

**7.** ಮೃತ ತಾಯವ್ವಳಿಗೆ ಆರೋಗ್ಯ ಸರಿ ಇರಲಿಲ್ಲ ಎಂದರೆ ಸರಿಯಲ್ಲ. ಮೃತ ತಾಯವ್ವ ಹೃದಯ ಸ್ತಂಬನದಿಂದ ಮೃತಪಟ್ಟಿದ್ದಾಳೆ ಎಂದರೆ ಸರಿಯಲ್ಲ. ಆರೋಪಿತರು ವಿಠ್ಠಲನ ಮನೆಗೆ ಬಂದಿಲ್ಲ, ಗಲಾಟೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ವಿಠ್ಠಲನಿಗಾಗಲಿ, ತಾಯವ್ವಳಿಗಾಗಲಿ ಹೊಡಿಬಡಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಗಲಾಟೆ ನೋಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ ಕೂಡ ವಿಠ್ಠಲನ ಕುಟುಂಬಕ್ಕೆ ಅನುಕೂಲವಾಗಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ: ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

**ಸಹಿ/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**